MYSORE LEGISLATIVE ASSEMBLY.

EIGHTEENTH DAY.

Friday, 15th March 1963.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Number of Municipalities in the State that have obtained Loan from Government.

*Q.—189. Sri B. CHANNABYRE GOWDA (Hoskote).—

Will the Government be pleased to state :—

(*a*) the number of municipalities in the State that have obtained loan from Government ;

(*b*) the number of municipalities that have repaid the loan amounts ;

(*c*) the number of municipalities which are yet to pay ;

(*d*) whether they are aware that most of the municipalities are unable to repay the loan amount due to financial stringency ;

(*e*) whether they propose in the circumstances to treat the loans as grants ?

*A.—Sri K. PUTTASWAMY (Minister for Municipal Administration).—

(*a*) 143.

(*b*) Except for one municipality (Kushtagi) none of the municipalities has repaid the loan amount in full. The repayment of loans is in progress.

(*c*) 142.

(*d*) No municipality has expressed its inability to repay the loan.

(*e*) No.

ಶ್ರೀ ಬಿ. ಚನ್ನಬೈರೇಗೌಡ.—ಸ್ವಾಮಿ, ಮುನಿಸಿಪಾಲಿಟಿಯವರು ಮನೆಯ ಮೇಲೆ ಜೇಕಾದಷ್ಟು ತೆರಿಗೆ ಹಾಕಿದ್ದಾರೆ, ಸಾಲ ವಾಪಸ್ ಕೊಡುವುದಕ್ಕೆ ಚೈತನ್ಯವಿಲ್ಲ ಎಂದು ಹೇಗೆ ಸೂಚಿಸುತ್ತದೆ ?

† ಶ್ರೀ ಕೆ. ಪುಟ್ಟಸ್ವಾಮಿ.—ಮುನಿಸಿಪಾಲಿಟಿಯವರು ಸಾಲ ತೆಗೆದುಕೊಳ್ಳುವಾಗ, ವಾಪಸ್ ಕೊಡಲು ಬೇಕಾದಷ್ಟು ಶಕ್ತಿಯಿದೆ ಎಂದು ತೋರಿಸುತ್ತಾರೆ. ಕಾಲಕ್ಕೆ ಮುಂಚೆ ಹಣ ವಾಪತಿ ಮಾಡುತ್ತೇವೆಂದು ಸಹ ಹೇಳುತ್ತಾರೆ. ಸಾಲ ಪಡೆದುಕೊಳ್ಳುವಾಗ್ಗೆ ಯಾವದೇ ಷರತ್ತಿಗೆ ಒಪ್ಪಿ ಕೊಳ್ಳುತಾರೆ. ಆದರೆ ಆ ಷರತ್ತು ಪಾಲಿಸುವುದರಲ್ಲಿ ಶ್ರದ್ಧೆ ತೋರಿಸುವದಿಲ್ಲ ಆದ್ದರಿಂದ ಮರು ವಾಪತಿ ಮಾಡುವುದು ಕಷ್ಟವಾಗಿತ್ತದೆ.

ಶ್ರೀ ಬಿ. ಚನ್ನಬೈರೇಗೌಡ.—ಒಟ್ಟು ಎಷ್ಟು ಹಣ ಬಾಕಿ ಇದೆ ?

ಶ್ರೀ ಕೆ ಪುಟ್ಟಸ್ವಾಮಿ.—ಬಜೆಟ್ ಮಂಡಿಸಿರುವದರಲ್ಲಿ ಇದು ಇದೆ. 682 ಲಕ್ಷ ರೂಪಾಯಿ ಬಾಕಿ ಇದೆ.

ಶ್ರೀ ಎಸ್. ಎಂ. ಕೃಷ್ಣ.—ಪಂಚವಾರ್ಷಿಕ ಯೋಜನೆಯಲ್ಲಿ ಮ್ಯೂನೂರು ಸರಕಾರ 110 ಕೋಟಿ ರೂಪಾಯಿ ಕೊಡತಕ್ಕದ್ದು ಇದೆ. ಮುನಿಸಿಪಾಲಿಟಿಯವರು ಕೊಡಬೇಕಾದ 6-7 ಕೋಟಿ ಇದರಲ್ಲಿ ಸೇರಿದೆಯೆ ?

ಶ್ರೀ ಕೆ. ಪುಟ್ಟಸ್ವಾಮಿ.—ಇಂಟರನಲ್ ರಿಸೋರ್ಸಸ್‌ನಲ್ಲಿ ಈ ಒಳು ಕೋಟಿ ಇದೆ. ಎಲ್ಲ ಹಣ ಈ ಅವಧಿಯಲ್ಲಿ ವಸೂಲಾಗುತ್ತದೆಂದು ಲೆಕ್ಕೆ ಹಾಕುವದಿಲ್ಲ. ಎಷ್ಟು ಹಣ ಬರುತ್ತದೆ ಎಂದು ನಿರೀಕ್ಷಣೆ ಮಾಡುತ್ತೆವೆಯೋ ಅದನ್ನು ಇದರಲ್ಲಿ ಹಾಕಲಾಗುವುದು.

ಶ್ರೀ ಇ. ನಾರಾಯಣಗೌಡ.—ಇನ್ನೂಸಾಲದ ಬಾಕಿ ಇದ್ದರೂ ಕೂಡ ಪುನಃ ಗ್ಯಾಂಟು, ಲೋನು ಮುನಿಸಿಪಾಲಿಟಿಗಳಿಗೆ ಕೊಡುತ್ತಾ ಇದ್ದೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಮನೆಯಲ್ಲಿ ಮಾತು ಕೇಳದೇ ಇರತಕ್ಕಂಥ ಮಕ್ಕಳಿಗೆ ಅನ್ನಹಾಕದೆ ಇರುವದಿಲ್ಲ. ಅದರಂತೆ ಮುನಿಸಿಪಾಲಿಟಿಯವರು ಆವಶ್ಯಕವಾದ ಕೆಲವು ಕೆಲಸಗಳನ್ನು ಮಾಡಲೇ ಬೇಕಾಗುತ್ತದೆ. ಒಳಚರಂಡಿ, ಮೇಲ್ಚರಂಡಿ ವ್ಯವಸ್ಥೆ ಅಗತ್ಯವಾಗಿ ಮಾಡಬೇಕಾಗುತ್ತದೆ, ಅನೇಕ ಸಲ ಸರಕಾರ ಹಣ ಕೊಡುವದಿಲ್ಲ ಎಂದು ಹೇಳಿ ಒಂದೆರಡು ಸಾರಿ ಬೇಡಿಕೆ ನಿರಾಕರಿಸಿ. ಕೊನೆಗೆ ಜನರ ಹಿತದೃಷ್ಟಿಯಿಂದ ಸಾಲ ಕೊಡುವುದು ಉಂಟು.

ಶ್ರೀ ಆರ್. ಎನ್.ಲಕ್ಮೀಪತಿ.—ಮುನಿಸಿಪಾಲಿಟಿ ವರಮಾನ ಎಷ್ಟಿದೆ, ವಾಪಸ್ ಕೊಡುವುದಕ್ಕೆ ಶಕ್ತಿ ಎಷ್ಟಿದೆ ಎನ್ನುವುದನ್ನು ಯೋಚನೆ ಮಾಡಿ ಸಾಲ ಕೊಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಹೀಗೆ ಕರಾರುವಾಕ್ಕಾಗಿ ಬ್ಯಾಂಕಿನವರ ಹಾಗೆ ಪರಿಶೀಲನೆ ಮಾಡಿ, ಮರುಪಾವತಿ ಮಾಡಲು ಶಕ್ತಿ ಎಷ್ಟಿದೆ ಎಂದು ನೋಡುವದಾದರೆ ಸಾಲ ಕೊಡಲು ಸಾಧ್ಯವಿಲ್ಲ, ಜನರಿಗೆ ಬೇಕಾದ ಸೌಲಭ್ಯ ಒದಗಿಸುವುದಕ್ಕೆ ಮುನಿಸಿಪಾಲಿಟಿಗಳಿಗೆ ಸಹಾಯ ಮಾಡಬೇಕಾಗುತ್ತದೆ. ಮುಂದೆ ತಮ್ಮಶಕ್ತಿ ಹೆಚ್ಚಿಸಿಕೊಳ್ಳುತ್ತೇವೆಂಬ ಭರವಸೆ ಕೊಡುವುದನ್ನು ನಂಬಿ ಸಾಲ ಕೊಡುವುದು ಉಂಟು.

ಶ್ರೀ ಸಿ. ಜೆ. ಮುನಿಕೃಷ್ಣಪ್ಪ.—ಕುಡಿಯುವ ನೀರಿನ ಪೂರೈಕೆ ವ್ಯವಸ್ಥೆಗೆ ಹಣ ಎಷ್ಟಿದೆ ?

ಶ್ರೀ ಕೆ. ಪುಟ್ಟಸ್ವಾಮಿ.—ಅದಕ್ಕೆ ಬೇರೆ ಬೇರೆ ಲೆಕ್ಕ ಇದೆ. Loan for water supply scheme 384.6 lakhs ಇದೆ.

ಶ್ರೀ ಎಚ್. ಹುಚ್ಚೆಮಾಸ್ತಿಗೌಡ.—ಮುನಿಸಿಪಾಲಿಟಿಗಳಿಗೆ ಕೊಟ್ಟಿರುವ ಹಣದ ಜೊತೆಗೆ ಕಾರ್ಯಕ್ರಮ ಪೂರೈಸುವುದಕ್ಕೆ ಎಷ್ಟು ಮೊಬಲಗು ಕೊಡುವುದಕ್ಕೆ ಏರ್ಪಾಡು ಮಾಡಿದೆ ?

ಶ್ರೀ ಕೆ. ಪುಟ್ಟಸ್ವಾಮಿ.—ಬಜೆಟ್ ಅಂದಾಜಿನಲ್ಲಿ ಈ ವರ್ಷ ಅದನ್ನು ತೋರಿಸಿದೆ.

ಶ್ರೀ ಡಿ. ಎಂ. ಸಿದ್ದಯ್ಯ — ಈ ಸಾಲದ ಹಣವನ್ನು ವಾಪಸ್ ಕೊಡಲಿಕ್ಕೇ ಬೇಕು ಎಂದು ನಿಯಮವಿದೆಯೆ ?

ಶ್ರೀ ಕೆ. ಪುಟ್ಟಸ್ವಾಮಿ.—ಸಾಲ ಎಂದರೆ ವಾಪಸ್ ಕೊಡಬೇಕಾಗುತ್ತದೆ ಎಂದು ಅರ್ಥ

ಶ್ರೀ ಎಚ್. ಹುಚ್ಚೆಮಾಸ್ತಿಗೌಡ.—Overdue ಆದ ಹಣ ಎಷ್ಟು ?

ಶ್ರೀ ಕೆ. ಪುಟ್ಟಸ್ವಾಮಿ.—ಚೋಟಲ್ ಫಿಗರ್ಸ್ ಇಲ್ಲ.

ಶ್ರೀ ಸಿ. ಎನ್. ಹುಲಕೋಟಿ.—ಬಹು ದೊಡ್ಡ ಪ್ರಮಾಣದಲ್ಲಿ ಬಾಕಿ ಬರತಕ್ಕಂಥ ಮುನಿಸಿಪಾಲಿಟಿ ಯಾವುದು ?

ಶ್ರೀ ಕೆ. ಪುಟ್ಟಸ್ವಾಮಿ.—ಇದನ್ನು ಲೆಕ್ಕಹಾಕಿ ಹೇಳುವದಕ್ಕಾಗುವದಿಲ್ಲ. ಸಣ್ಣ ದೊಡ್ಡ ಮುನಿಸಿಪಾಲಿಟಿಗಳು ಇರುತ್ತವೆ. ಒಂದಕ್ಕೆ 10 ಲಕ್ಷ ಪಾಪ್ಯುಲೇಷನ್ ಇರುತ್ತದೆ. ಆದರ ಯೋಗ್ಯತೆಗೆ ಅನುಸರಿಸಿ ಕರಾರುವಾಕ್ಕಾಗಿ ಯಾವುದು over due, ಯಾವುದು ಹೆಚ್ಚು ಹೇಳುವುದ ಕ್ಕಾಗುವದಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ಮುನಿಸಿಪಾಲಿಟಿಯ ಆದಾಯ ಪೆಚ್ಚು ಪರಿಶೀಲಿಸಿ ವಾಪಸ್ ಕೋಡುವುದಕ್ಕೆ ಅವಕಾಶ ಕೋಡುತ್ತಿರಾ ?

†Indicates that the remarks or speeches have not been revised by the member concerned.

ಶ್ರೀ ಕೆ. ಪುಟ್ಟಸ್ವಾಮಿ.—ತಮ್ಮ ಮುಂದೆ ಈ ಸಭೆಯಲ್ಲಿ ಒಂದು ಸಮಗ್ರವಾದಂಥ ಪೌರ ಸಭಾ ಕಾನೂನನ್ನು ಮಂಡಿಸುತ್ತೇವೆ. ಬೇಕಾದಂಥ ಕಾನೂನನ್ನು ಅಳವಡಿಸಬಹುದು. ಕೆಲವು ಪೌರ ಸಭೆಯಲ್ಲಿ ಇರುವ ಉತ್ಪನ್ನವನ್ನು ಹೆಚ್ಚಿಸುವುದಕ್ಕೆ ಅವಕಾಶವಿದ್ದರೂ ಸಹ ಅದನ್ನು ಮಾಡಿಲ್ಲ. ಅದರ ಫಲವಾಗಿ ಜನಗಳಿಗೆ ಒದಗಿಸಬೇಕಾದ ಅನುಕೂಲ ಒದಗಿಸಿಲ್ಲ. ಅದು ಅವರಿಗೆ ಸಾಧ್ಯವಾಗಿಲ್ಲ. ಸರಕಾರದ ಅಭಿಪ್ರಾಯದಲ್ಲಿ ಜನಗಳಿಗೆ ಅಗತ್ಯವಾಗಿ ಒದಗಿಸಬೇಕಾದುದನ್ನು ಒದಗಿಸಲು ಯಾವಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತದೆ. ಒಂದು ವೇಳೆ ಪೌರಸಭಾ ಸಹಕರಿಸದೆ ಹೋದರೆ ಸರಕಾರ ನೇರವಾಗಿ ತಾವೇ ಕ್ರಮ ತೆಗೆದುಕೊಂಡು ಜನಗಳಿಗೆ ಸೌಲಭ್ಯ ಒದಗಿಸಲೇ ಬೇಕಾಗುತ್ತದೆ.

ಶ್ರೀ ಟಿ. ಮಾಡೆಯ್ಯಗೌಡ.—ಸ್ವಾಮಿ, ಪೌರಸಭಾ ಸಾಲ ಪಡೆಯುವಾಗ್ಗೆ ತಮ್ಮ ಆದಾಯ ಯಾವರೀತಿ ಹೆಚ್ಚಿಸಿಕೊಳ್ಳುವುದಕ್ಕೆ ವಾಗ್ದಾನ ಮಾಡಿರುತ್ತದೆ ಮತ್ತು ಆದಾಯ ಹೆಚ್ಚಿಸಿಕೊಂಡು ಹೋದರೂಸಹ ಪರಾಪಸ್ ಕೊಡದೇ ಇದ್ದ ನಂದರ್ಬದಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—ಇದುವರೆಗೆ ನಿಷ್ಕರ್ಷವಾಗಿ ಅಂಥ ಯಾವ ಕ್ರಮ ತೆಗೆದುಕೊಂಡಿಲ್ಲ. ಈ ಸಭೆಯಲ್ಲಿ ಕಾನೂನು ಮಂಡಿಸುವವರಿದ್ದೇವೆ. ಸರಕಾರಕ್ಕೆ ಯಾವ ಅಧಿಕಾರ ಕೊಡುತ್ತೀರೋ ಖಂಡಿತವಾಗಿ ಅಂಥ ಕ್ರಮ ತೆಗೆದುಕೊಳ್ಳಲಾಗುವುದು.

Sri V. S. PATIL.—Have the Government given loans for water supply to the municipalities and if so, what is the amount that is given for water supply schemes ?

Sri K. PUTTASWAMY.—I have already answered that question, Rs. 384.6 lakhs.

Sri V. S. PATIL.—Has the Government changed the policy of granting loans for construction of water supply works to municipalities ? Have they stopped it now ?

Sri K. PUTTASWAMY.—That can never be the policy which any Government can accept.

Sri V. S. PATIL.—My question has not been understood by the Hon'ble Minister From his last answer it appeared that Government was giving loans for construction of water supply schemes to municipalities. Now is that policy continued or is it stopped and the Government takes up water works and sell water to the municipalities ?

Sri K. PUTTASWAMY.—Probably the Hon'ble Member did not follow my answer. The policy is to give loans to municipalities so that they may construct water works and supply water and also be able to return the amounts advanced to them as loans. If one or two municipalities, do not make any effort at all to take up such works, then Government cannot sit by and watch. Government will have to make other arrangements.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಬಹು ಭಾಗ ಹಣವನ್ನ ಮುನಿಸಿಪಾಲಿಟಿಯವರು ಕೊಡದೆ ತಡ ಪಾಡಿರತಕ್ಕಂಥ ನಂದರ್ಭದಲ್ಲಿ, ಮುನಿಸಿಪಾಲಿಟಿಯವರ ಮೇಲೆ ಎಷ್ಟರಮಟ್ಟಿಗೆ ತಾವು ಆಕ್ಷೇ ತೆಗೆದು ಕೊಂಡಿದ್ದೀರಾ ? ಅವರ ಆಸ್ತಿಗಳನ್ನು ಹರಾಜುಮಾಡಿ ಹಣ ವಸೂಲ ಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಇನ್ನೂ ಸರ್ಕಾರದವರು ಮುಲಾಜಿನಿಂತೆ ವರ್ತಿಸುತ್ತಿಲ್ಲ.

Sri V. S. PATIL.—My question is that whether the policy of the Government to give loans to the Municipalities for construction of Water Works is still there or whether it is stopped ? I am asking this, because in the case of Belgaum Municipality when the Water Works was under construction, the Municipality had asked for a loan and your Government have replied that they have stopped this system and they will construct the Water Works themselves-Reservoirs and Pipe-lines and then sell the water. That is why I am asking whether they have changed the policy.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಅವರು ಯಾವ ಕಾಗದಕ್ಕೆ ರೆಫರ್‌ಮಾಡಿ ಹೇಳುತ್ತಿದ್ದಾರಯ್ಯೋ ಅದು ನನಗೆ ಗೊತ್ತಿಲ್ಲ. ಆದರೆ ಕೆಲವು ಪುರಸಭೆಗಳು ಅದೃಷ್ಟಶಾಲಿ ಪುರಸಭೆಗಳು, ಅದರಲ್ಲಿ ಬೆಳಗಾವಿಯೂ ಒಂದು. ಸರ್ಕಾರ ಅವರ ಒಂದು ಸ್ವಂತ ಖರ್ಚಿನಿಂದ ನೀರು ಸರಬರಾಜು ವ್ಯವಸ್ಥೆ ಮಾಡಿ ಪಟ್ಟಣದವರಿಗೂ ನೀರು ತಂದುಬಿಟ್ಟ ಅದೃಷ್ಟ ಯಾರಿಗೂ ದೊರೆತಿಲ್ಲ, ಲಾಭವಿಲ್ಲದೆ ಓದಗಿಸುತ್ತ ಇದ್ದೇವೆ. ಅನೇಕ ಪುರಸಭೆಗಳಲ್ಲ ಅವರೇ ಓದಗಿಸುವುದು ಸರ್ಕಾರದ ನೀತಿಯಾಗಿರುತ್ತದೆ. ಯಾವ ಯಾವ ಪುರಸಭೆಗಳು ಮುಂದೆ ಬಂದು ನೀರು ಸರಬರಾಜು ಮಾಡುವುದಕ್ಕೆ ಸಾಧ್ಯವಾಗಿದೆಯೋ ಅಂಥ ಪುರಸಭೆಗಳಿಗೆ ಸಾಲ ಕೊಡುತ್ತಿದೆ. ಬಹುಶಃ ಬೆಳಗಾಂ ಪುರಸಭೆಯವರು ಅವರ ಶಕ್ತಿಮೀರಿ ಹಣ ಖರ್ಚು ಮಾಡಬೇಕಾಗಿ ಬಂದಿರಬಹುದು. ನನಗೆ ತಿಳಿದಮಟ್ಟಿಗೆ ಬೆಳಗಾವಿಗೆ ನೀರು ಸರಬರಾಜಿಗಾಗಿ 69 ಲಕ್ಷವೋ 70 ಲಕ್ಷ ರೂಪಾಯಿ ಖರ್ಚಾಗಿದೆ. ಅಷ್ಟು ಹಣವನ್ನೂ ಸಹಾಯವಾಗಿ ಮಾಡಿದರೆ ವಾಪಸು ಕೊಡುವುದು ಕಷ್ಟವಾಗಬಹುದು ಎಂದು ತಿಳಿದು ಸರ್ಕಾರದವರು ಏನಾದರೂ ಈ ರೀತಿ ಉತ್ತರ ಕೊಟ್ಟರೋ ನನಗಂತೂ ಗೊತ್ತಿಲ್ಲ. ಪೌರಸಭೆಗೆ ಸಾಲ ಓದಗಿಸುವ ನೀತಿ ಮುಂದಿನವರಿಸಿಕೊಂಡು ಹೋಗುತ್ತಾ ಇದ್ದೇವೆ.

ಶ್ರೀ ಟಿ. ಎಸ್. ಶಿವಣ್ಣ.—ತೆಗೆದುಕೊಂಡ ಸಾಲವನ್ನು ಮುನಿಸಿಪಾಲಿಟಿಯವರು ಸರಿಯಾಗಿ ವಾಪಸು ಕೊಟ್ಟು, ಅಂಥ ಮುನಿಸಿಪಾಲಿಟಿಯವರು ಎಳ್ಳೆಯ ಕೆಲಸವನ್ನು ಮಾಡುತ್ತೇವೆಂದರೆ, ಅವರಿಗೆ ಏಕೆ ಸಾಲ ಕೊಡುವುದಿಲ್ಲ ಹಾಗಿದ್ದರೆ ?

ಶ್ರೀ ಕೆ. ಪುಟ್ಟಸ್ವಾಮಿ.—ಪೌರಸಭೆಯವರು ಅವರ ಕಂತುಗಳನ್ನು ಸರಿಯಾಗಿ ಪಾವತಿ ಮಾಡುತ್ತಿದ್ದಾರೆಂದು, ಅವರು ಕೇಳಿ ಕೇಳಿದ ಕಾರ್ಯಗಳಿಗೆ ಹಣ ಕೊಡುವುದಕ್ಕಾಗುವುದಿಲ್ಲ. ಉಪಯುಕ್ತವಾದ, ಜನಗಳಿಗೆ ಅಗತ್ಯವಾಗಿ ಬೇಕಾಗಿರತಕ್ಕಂಥ ಕಾರ್ಯಗಳಿಗೆ ಕೇಳಿದರೆ ಕೊಡಬಹುದು. ಅನಗತ್ಯವಾದ ಕೆಲಸಗಳಿಗೆ ಹಣ ಕೇಳಿದರೆ, ಕೊಡುವುದು ಸಾಧ್ಯವಾಗುವುದಿಲ್ಲ.

ಶ್ರೀ ಬಿ. ಜನ್ನಬೈರೇಗೌಡ.—ಪೌರಸಭೆಗೆ ನೀರು ಸರಬರಾಜಿಗಾಗಿ ಹಣಕೊಟ್ಟು ನೀರು ಓದಗಿಸಿದ್ದಾರೆ. ಆ ಪುರಸಭೆಗೆ ಕೊಟ್ಟ ಸಾಲವನ್ನು ಗ್ರಾಂಟ್ ಆಗಿ ಕನ್‌ವರ್ಟ್ ಮಾಡುವುದು ಸರ್ಕಾರದ ಕರ್ತವ್ಯವಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ ಈ ವಾದ ವಿವಾದಗಳಲ್ಲಿ ಸರ್ಕಾರದಿಂದ ಒಂದು ಪಾಯಿಂಟ್ ಗೇಜ್ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ತಮ್ಮ ಕರ್ತವ್ಯವನ್ನು ಪಾಲಿಸುವುದಕ್ಕೆ ಪೌರಸಭೆಗಳಿಗೆ ಸರ್ಕಾರದವರು ಬಹಳ ಉದಾರವಾದಂಥ ಸಹಾಯವನ್ನು ಮಾಡುತ್ತಾರೆ. ಆ ಹಣವನ್ನು ಉಪಯೋಗಿಸಿಕೊಂಡು ಮಾಡಬೇಕು. ಪೌರಸಭೆಗಳು ಈ ಸಹಾಯವನ್ನು ಉಪಯೋಗಿಸಿಕೊಳ್ಳದೆ ಹೋದಂಥ ಕಾಲದಲ್ಲಿ ಅಲ್ಲಿಯ ಪುರಜನರಿಗೆ ಅತ್ಯಗತ್ಯವಾಗಿ ಓದಗಿಸಬೇಕಾದಂಥ ಸೌಲಭ್ಯಗಳನ್ನು ಸರ್ಕಾರದವರು ಓದಗಿಸಿಕೊಡುತ್ತಾರೆ. ಪೌರಸಭೆಗಳೇ ಮೊದಲು ನೇರವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕು.

Repair Works, etc., of Primary Schools in the Villages

*Q.—234. Sri S. V. RAME GOWDA (Malur).—

Will the Government be pleased to state:—

whether they intend to hand over the repair works, etc., of Primary Schools in the villages, to the Public Works Department instead of them being undertaken now by Taluk Boards ?

A.—Sri RAMAKRISHNA HEGDE (Minister for Co-operation and Development).—

No.

ಶ್ರೀ ಎಸ್. ವಿ. ರಾಮೇಗೌಡ.—ತಾಲ್ಲೂಕು ಬೋರ್ಡುಗಳಿಗೆ ಹಣಕೊಟ್ಟಿದ್ದೇವೆಂದು ಹೇಳಿದ್ದೀರಿ. ಎಷ್ಟೆಷ್ಟು ಹಣ ಕೊಟ್ಟಿದ್ದೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ತಾಲ್ಲೂಕು ಬೋರ್ಡುಗಳಿಗೆ ಕೊಟ್ಟಿದ್ದೇವೆಂದು ಹೇಳಿಲ್ಲವಲ್ಲಾ ?

Mr. SPEAKER.—They have no intention even to give.